# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1255

ಸದಸ್ಯರ ಹೆಸರು : ಡಾ. ಎಂ.ಜಿ. ಮುಳೆ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 17.12.2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ಅನುಕಂಪದ ಆಧಾರದ ಮೇಲೆ ನೀಡಿರುವ ನೇಮಕಾತಿ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು ವಿವರ ಒದಗಿಸುವುದು)</td><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ವಿವಿಧ ವೃಂದದ ಒಟ್ಟು 331 ಪ್ರಕರಣಗಳಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲಾಗಿದೆ. ವರ್ಷಾವಾರು ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷವಾರು</th><th>ಕಿರಿಯ ಸಹಾಯಕ-ಕಂ-ಡಾಟಾ ಎಂಟ್ರಿ ಆಪರೇಟರ್</th><th>ಕರಾಸಾ ಪೇದೆ</th><th>ಚಾಲಕ-ವ-ನಿರ್ವಾಹಕ</th><th>ಚಾಲಕ</th><th>ನಿರ್ವಾಹಕ</th><th>ತಾಂತ್ರಿಕ ಸಹಾಯಕ</th><th>ಕಛೇರಿ ಸಹಾಯಕ (ದರ್ಜೆ-೪)</th><th>ಒಟ್ಟು</th></tr>
<tr><td>2021-2022</td><td colspan="8" rowspan="2">ಕೋವಿಡ್-19 ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆ ಸಂ: ಆಇ:೦3:ಬಿಇಎಂ.2020 ದಿನಾಂಕ:06.07.2020 ರ ಆದೇಶದಂತೆ, ಸಂಸ್ಥೆಯಲ್ಲಿ ಅನುಕಂಪ ಆಧಾರದ ನೇಮಕಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.</td></tr>
<tr><td>2022-2023</td></tr>
<tr><td>2023-2024</td><td>200</td><td>0</td><td>0</td><td>5</td><td>6</td><td>9</td><td>30</td><td>250</td></tr>
<tr><td>2024-2025</td><td>0</td><td>25</td><td>0</td><td>2</td><td>4</td><td>13</td><td>21</td><td>65</td></tr>
<tr><td>2025-2026</td><td>0</td><td>1</td><td>2</td><td>0</td><td>5</td><td>5</td><td>3</td><td>16</td></tr>
<tr><td>ಒಟ್ಟು</td><td>200</td><td>26</td><td>2</td><td>7</td><td>15</td><td>27</td><td>54</td><td>331</td></tr>
</table>
</td></tr>
<tr><td>ಆ</td><td>ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ರೂಪಿಸಿರುವ ನಿಯಮಗಳೇನು; (ನಿಯಮಗಳ ಪ್ರತಿ ಒದಗಿಸುವುದು)</td><td>ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ರೂಪಿಸಿರುವ ಮತ್ತು ಜಾರಿಯಲ್ಲಿರುವ ಕೆಳಕಂಡ ನಿಯಮ ಮತ್ತು ಸುತ್ತೋಲೆಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br>(1)) ಅನುಕಂಪ ನೀತಿ-2018 ದಿ: 4/12/2018<br>(2) ಸುತ್ತೋಲೆ ಸಂ: 1700 ದಿ: 31/01/2022<br>(3) ಸುತ್ತೋಲೆ ಸಂ:162 ದಿ: 10/3/2023<br>(4) ಸುತ್ತೋಲೆ ಸಂ: 1727 ದಿ: 4/10/2024</td></tr>
</table>

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027, ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂಖ್ಯೆ:ಕರಾಸಾ:ಕೇಕ:ಆಡಳತ:ಸೇನಿ: 197 :2018-19

ದಿನಾಂಕ: 04-12-2018

ವಿಷಯ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018.
ಉಲ್ಲೇಖ: ನಿಗಮದ ನಿರ್ದೇಶಕರ ಮಂಡಳಿಯ ಠರಾವು ಸಂಖ್ಯೆ:10053 ದಿನಾಂಕ:07-07-2018

ಪ್ರಸ್ತಾವನೆ:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಮೃತಾವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ ಪ್ರಸ್ತುತ ನಿಗಮದಲ್ಲಿ ಜಾರಿಯಲ್ಲಿರುವ ಎಲ್ಲಾ ಸುತ್ತೋಲೆ ಮತ್ತು ಆದೇಶಗಳನ್ನು ಹಿಂಪಡೆದು, ಕರ್ನಾಟಕ ಸರ್ಕಾರದಲ್ಲಿ ಇರುವ ನಿಯಮಾವಳಿಗಳ ಮಾದರಿಯಲ್ಲಿ ನೀತಿಯನ್ನು ನಿಗಮದ ಅಗತ್ಯತೆಗೆ ಅನುಗುಣವಾಗಿ, ಸೂಕ್ತ ಮಾರ್ಪಾಡಿನೊಂದಿಗೆ ಅಳವಡಿಸಿಕೊಳ್ಳುವ ಪ್ರಸ್ತಾವನೆಗೆ ನಿಗಮದ ನಿರ್ದೇಶಕರ ಮಂಡಳಿಯು ತನ್ನ ಠರಾವು ಸಂಖ್ಯೆ:10053 ದಿನಾಂಕ:07-07-2018 ರಲ್ಲಿ ಒಪ್ಪಿಗೆ ನೀಡಿರುತ್ತದೆ. ಅದರಂತೆ, ಈ ಕೆಳಕಂಡಂತೆ ನೀತಿಯನ್ನು ರೂಪಿಸಲಾಗಿದೆ.

"ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018"

I ಹೆಸರು ಮತ್ತು ಪ್ರಾರಂಭ:

1. ಈ ನೀತಿಯನ್ನು "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018" ಎಂದು ಕರೆಯಲಾಗುವುದು.
2. ಈ ನೀತಿಯು ಕ.ರಾ.ರ.ಸಾ ನಿಗಮದ ಕೇಂದ್ರ ಕಛೇರಿಯ ಸೂಚನಾಫಲಕದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವುದು.
3. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ರಲ್ಲಿ ನಿರ್ದಿಷ್ಟಪಡಿಸಿರದ ಅಂಶಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 1982 ರ ನಿಯಮಾವಳಿಗಳು ಅನ್ವಯವಾಗುತ್ತದೆ.

II ವ್ಯಾಖ್ಯಾನ:

1. (a)"ಸಂಸ್ಥೆಯ ಮೃತ ನೌಕರ" ಅಂದರೆ-ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಸೇವೆಯಲ್ಲಿರುವಾಗ ಮೃತಪಟ್ಟ ನೌಕರ (ಪರೀಕ್ಷಾರ್ಥ ಹಾಗೂ ತರಬೇತಿ ನೌಕರರು ಒಳಗೊಂಡಂತೆ).

   (b)"ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೃತ ನೌಕರರ ಅವಲಂಬಿತ" ಅಂದರೆ-

   i. ಸಂಸ್ಥೆಯ ಮೃತ ನೌಕರ ಪುರುಷ ನೌಕರನಾಗಿದ್ದಲ್ಲಿ, ಆತನ ಪತ್ನಿ, ಮಗ ಹಾಗೂ ಅವಲಂಬಿತ ಅವಿವಾಹಿತ ಮಗಳು ಮತ್ತು ವಿಧವಾ ಮಗಳು.

ii. ಸಂಸ್ಥೆಯ ಮೃತ ನೌಕರ ಮಹಿಳಾ ನೌಕರಳಾಗಿದ್ದಲ್ಲಿ, ಆಕೆಯ ಪತಿ, ಮಗ ಹಾಗೂ ಆಕೆಯ ಅವಲಂಬಿತ ಅವಿವಾಹಿತ ಮಗಳು ಮತ್ತು ವಿಧವಾ ಮಗಳು.

iii. ಒಂದು ವೇಳೆ ಸಂಸ್ಥೆಯ ಮೃತ ಪುರುಷ ನೌಕರನು ಅವಿವಾಹಿತನಾಗಿದ್ದಲ್ಲಿ, ಆತನ ಅವಲಂಬಿತ ಅವಿವಾಹಿತ ಸಹೋದರ, ಅವಿವಾಹಿತ ಸಹೋದರಿ ಅಥವಾ ವಿಧವಾ ಸಹೋದರಿ.

iv. ಒಂದು ವೇಳೆ ಸಂಸ್ಥೆಯ ಮೃತ ಮಹಿಳಾ ನೌಕರಳು ಅವಿವಾಹಿತಳಾಗಿದ್ದಲ್ಲಿ, ಆಕೆಯ ಅವಲಂಬಿತ ಅವಿವಾಹಿತ ಸಹೋದರ, ಅವಿವಾಹಿತ ಸಹೋದರಿ ಅಥವಾ ವಿಧವಾ ಸಹೋದರಿ.

<u>(c) ಸಂಸ್ಥೆಯ ಮೃತ ನೌಕರರಿಗೆ ಸಂಬಂಧಿಸಿದಂತೆ "ಕುಟುಂಬ" ಎಂದರೆ:</u> ಆತ/ಆಕೆ, ಪತಿ/ಪತ್ನಿ ಮತ್ತು ಅವರ ಮಗ, 1(ಅವಿವಾಹಿತ ಮಗಳು ಅಥವಾ ವಿಧವಾ ಮಗಳು), 2(ಅವಿವಾಹಿತ ಸಹೋದರ, ಅವಿವಾಹಿತ ಅಥವಾ ವಿಧವಾ ಸಹೋದರಿ).

<u>2.</u> ಬಳಸಿರುವ ಯಾವುದೇ ಪದ ಅಥವಾ ಪದವಿನ್ಯಾಸ ವ್ಯಾಖ್ಯಾನ ಮಾಡದಿದ್ದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 1982 ರ ನಿಯಮಾವಳಿಗಳಲ್ಲಿರುವ ಅರ್ಥವು ಅನ್ವಯವಾಗುತ್ತದೆ.

<u>III ನೇಮಕಾತಿಗೆ ಅರ್ಹತೆಗಳು:-</u>

1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ರಡಿಯಲ್ಲಿ ಮೃತಾವಲಂಬಿಗಳು ನೌಕರಿ ಪಡೆಯುವುದು ತಮ್ಮ ಹಕ್ಕು ಎಂದು ಪರಿಗಣಿಸತಕ್ಕದ್ದಲ್ಲ.
2. ಈ ನೀತಿಯಡಿಯಲ್ಲಿ ಕುಟುಂಬ ವ್ಯಾಖ್ಯಾನದ ಪರಿಮಿತಿಗೆ ಒಳಪಟ್ಟಂತೆ ನಿಗಮದ ಮೃತ ನೌಕರರ ಅವಲಂಬಿತರಿಗೆ ಈ ಕೆಳಕಂಡ ಆದ್ಯತಾ ಕ್ರಮವನ್ನು ಅನುಸರಿಸಿ ಉದ್ಯೋಗ ನೀಡುವುದು.
   1) ಒಂದು ವೇಳೆ ಮೃತ ನೌಕರ ಪುರುಷನಾಗಿದ್ದಲ್ಲಿ:
      ಅ) ವಿಧವಾ ಪತ್ನಿ;
      ಆ) ವಿಧವಾ ಪತ್ನಿ ನೇಮಕಾತಿ ಅರ್ಹತೆ ಹೊಂದಿರದಿದ್ದಲ್ಲಿ ಅಥವಾ ಸೂಕ್ತ ಕಾರಣದೊಂದಿಗೆ ನೇಮಕಾತಿ ಹೊಂದಲು ಇಚ್ಛಿಸದಿದ್ದಲ್ಲಿ, ಸಂಸ್ಥೆಯ ಮೃತ ನೌಕರನ ಮಗ;

ಇ) ವಿಧವಾ ಪತ್ನಿ ಹಾಗೂ ಮಗ ಅರ್ಹತೆ ಹೊಂದಿರದಿದ್ದಲ್ಲಿ ಅಥವಾ ಸೂಕ್ತ ಕಾರಣದೊಂದಿಗೆ ಅವರು ನೇಮಕಾತಿ ಹೊಂದಲು ಇಚ್ಛಿಸದಿದ್ದಲ್ಲಿ, ಅವಿವಾಹಿತ ಮಗಳು;

ಈ) ವಿಧವಾ ಪತ್ನಿ, ಮಗ ಮತ್ತು ಅವಿವಾಹಿತ ಮಗಳು ಅರ್ಹತೆ ಹೊಂದಿರದಿದ್ದಲ್ಲಿ ಅಥವಾ ಸೂಕ್ತ ಕಾರಣದೊಂದಿಗೆ ಅವರು ನೇಮಕಾತಿ ಹೊಂದಲು ಇಚ್ಛಿಸದಿದ್ದಲ್ಲಿ, ವಿಧವಾ ಮಗಳು;

1(ಅ) ಒಂದು ವೇಳೆ ಮೃತ ನೌಕರ ಅವಿವಾಹಿತ ಪುರುಷನಾಗಿದ್ದಲ್ಲಿ ಆತನನ್ನು ಅವಲಂಬಿಸಿರುವ:

ಅ) ಅವಿವಾಹಿತ ಸಹೋದರ;

ಆ) ಅವಿವಾಹಿತ ಸಹೋದರಿ ಅಥವಾ ವಿಧವಾ ಸಹೋದರಿ:

2) ಒಂದು ವೇಳೆ ಮೃತ ನೌಕರ ಮಹಿಳೆಯಾಗಿದ್ದಲ್ಲಿ:

ಅ) ಮಗ;

ಆ) ಮಗ ನೇಮಕಾತಿಗೆ ಅರ್ಹತೆ ಹೊಂದಿರದಿದ್ದಲ್ಲಿ ಅಥವಾ ಸೂಕ್ತ ಕಾರಣದೊಂದಿಗೆ ನೇಮಕಾತಿ ಹೊಂದಲು ಇಚ್ಛಿಸದಿದ್ದಲ್ಲಿ, ಅವಿವಾಹಿತ ಮಗಳು;

ಇ) ಮಗ ಮತ್ತು ಅವಿವಾಹಿತ ಮಗಳು ನೇಮಕಾತಿಗೆ ಅರ್ಹತೆ ಹೊಂದಿರದಿದ್ದಲ್ಲಿ ಅಥವಾ ಸೂಕ್ತ ಕಾರಣದೊಂದಿಗೆ ಅವರು ನೇಮಕಾತಿ ಹೊಂದಲು ಇಚ್ಛಿಸದಿದ್ದಲ್ಲಿ, ವಿಧುರ ಪತಿ;

ಈ) ಮಗ, ಅವಿವಾಹಿತ ಮಗಳು ಹಾಗೂ ವಿಧುರ ಪತಿ ನೇಮಕಾತಿಗೆ ಅರ್ಹತೆ ಹೊಂದಿರದಿದ್ದಲ್ಲಿ ಅಥವಾ ಸೂಕ್ತ ಕಾರಣದೊಂದಿಗೆ ಅವರು ನೇಮಕಾತಿ ಹೊಂದಲು ಇಚ್ಛಿಸದಿದ್ದಲ್ಲಿ, ವಿಧವಾ ಮಗಳು.

2(ಅ) ಒಂದು ವೇಳೆ ಮೃತ ನೌಕರ ಅವಿವಾಹಿತ ಮಹಿಳೆಯಾಗಿದ್ದಲ್ಲಿ; ಆಕೆಯನ್ನು ಅವಲಂಬಿಸಿರುವ:

ಅ) ಅವಿವಾಹಿತ ಸಹೋದರ;

ಆ) ಅವಿವಾಹಿತ ಸಹೋದರಿ ಅಥವಾ ವಿಧವಾ ಸಹೋದರಿ.

3)ಒಂದು ವೇಳೆ ಮೃತ ನೌಕರನ ಅವಿವಾಹಿತ ಮಗಳು ನೇಮಕಾತಿಗಾಗಿ ಅರ್ಜಿಸಲ್ಲಿಸಿ, ನೇಮಕಾತಿ ಹೊಂದುವ ಸಮಯದಲ್ಲಿ ಮದುವೆಯಾಗಿದ್ದರೆ ಅಂತಹ ಅಭ್ಯರ್ಥಿಗಳು ನೇಮಕಾತಿಗೆ ಅರ್ಹರಲ್ಲ.

3. ಮೃತ ನೌಕರರ ದತ್ತು ಪಡೆದ ಮಗ ಅಥವಾ ಮಗಳು ಈ ನೀತಿಯನ್ವಯ ನೇಮಕಾತಿಗೆ ಅರ್ಹರಲ್ಲ.

4. ಮೃತಾವಲಂಬಿತರು ಅರ್ಜಿ ಸಲ್ಲಿಸುವಾಗ ಅಂತಹ ವ್ಯಕ್ತಿಯ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆಯ ತನಿಖೆ ಅಥವಾ ವಿಚಾರಣೆ ನಡೆಯುತ್ತಿರುವಾಗ, ಕೊಲೆ ಮಾಡಿದ ಆರೋಪದಲ್ಲಿದ್ದಾಗ ಅಥವಾ ಅಂತಹ ಆರೋಪವನ್ನು ಆಯೋಗದ ಶಿಫಾರಸ್ಸಿಗೆ ಒಳಪಟ್ಟಿದ್ದರೆ, ಸದರಿ ನೀತಿಯನ್ವಯ ನೇಮಕಾತಿಗೆ ಅರ್ಹರಾಗುವುದಿಲ್ಲ.

5. ಮೃತ ನೌಕರನ ಪತ್ನಿಯು ನೇಮಕಗೊಂಡು ಮರು ವಿವಾಹವಾಗಬಹುದಾಗಿದೆ. ಒಂದು ವೇಳೆ ವಿದುವೆಗೆ ಮರು ವಿವಾಹದ ಮುಂಚೆ ಯಾವುದೇ ಮಕ್ಕಳಿರದೇ ಇದ್ದು, ನೇಮಕಾತಿ ಸಮಯದಲ್ಲಿ ಮರು ವಿವಾಹವಾಗಿದ್ದರೆ ನೇಮಕಾತಿಗೆ ಅರ್ಹರಾಗುವುದಿಲ್ಲ. ಆದರೆ, ಮೃತ ನೌಕರನ ಮಕ್ಕಳು ಇದ್ದಂತಹ ಸಂದರ್ಭದಲ್ಲಿ ಮೃತ ನೌಕರನ ಮಕ್ಕಳು ಆಥವಾ ಮರುವಿವಾಹಿತ ವಿದುವೆ ನೇಮಕಾತಿಗೆ ಆರ್ಹರಾಗುತ್ತಾರೆ.

## IV ನೇಮಕಾತಿ ಷರತ್ತು ಮತ್ತು ನಿಬಂಧನೆಗಳು:

ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವುದು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:-

(1) ಬಡತನ ಹಾಗೂ ಆರ್ಥಿಕ ಬಿಕ್ಕಟ್ಟು/ಸಂಕಷ್ಟದಲ್ಲಿರುವ ಮೃತ ನೌಕರರ ಕುಟುಂಬವು ಮಾತ್ರ ಉದ್ಯೋಗ ಪಡೆಯಲು ಆರ್ಹತೆ ಹೊಂದಿರುತ್ತದೆ.

ವಿವರಣೆ:-ಅ) ಮೃತ ನೌಕರರ ಅವಲಂಬಿತರು ಉದ್ಯೋಗ ಕೋರಿ ಅರ್ಜಿ ಸಲ್ಲಿಸುವಾಗ ಸದರಿ ಕುಟುಂಬದ ಆರ್ಥಿಕ ಬಿಕ್ಕಟ್ಟಿನ/ಸಂಕಷ್ಟದ ಮೇಲೆ ಅವಲಂಬಿಸಿದ್ದು, ಕುಟುಂಬದ ಮಾಸಿಕ ಆದಾಯವು ಎಲ್ಲಾ ಮೂಲಗಳಿಂದ ಬೆಂಗಳೂರಿನಲ್ಲಿ ಕ.ರಾ.ರ.ಸಾ.ನಿಗಮದ ಸಹಾಯಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಪಡೆಯುವ ಗರಿಷ್ಠ ಮತ್ತು ಕನಿಷ್ಠ ವೇತನ ಶ್ರೇಣಿಯ ಸರಾಸರಿಗಿಂತ ಮೇಲ್ಪಟ್ಟು ಇರತಕ್ಕದ್ದಲ್ಲ. ಈ ವೇತನವು ಮೂಲವೇತನ, ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ಒಳಗೊಂಡಿರುತ್ತದೆ. ಕುಟುಂಬದ ಆದಾಯ ಲೆಕ್ಕ ಮಾಡುವಾಗ ಕುಟಂಬ ಪಿಂಚಣಿ, ಭಾರಿ ಮೊತ್ತದ ಕ್ರೋಢಿಕೃತ ಪಿಂಚಣಿ ಸೌಲಭ್ಯಗಳು ಮತ್ತು ಇವುಗಳಿಂದ ಗಳಿಸಿದ ಬಡ್ಡಿಯನ್ನು ಪರಿಗಣಿಸತಕ್ಕದ್ದಲ್ಲ.

ಆ) ಮೃತಾವಲಂಬಿರ ಕುಟುಂಬದ ಆದಾಯವನ್ನು ಲೆಕ್ಕಹಾಕುವಾಗ ಕುಟಂಬ ಪಿಂಚಣಿ, ಭಾರಿ ಮೊತ್ತದ ಕ್ರೋಢಿಕೃತ ಪಿಂಚಣಿ ಸೌಲಭ್ಯಗಳು ಮತ್ತು ಇವುಗಳಿಂದ ಗಳಿಸಿದ ಬಡ್ಡಿಯನ್ನು ಹೊರತುಪಡಿಸಿ ಕುಟುಂಬದ ಎಲ್ಲಾ ಮೂಲದ ಕ್ರೋಢಿಕೃತ ಆದಾಯವನ್ನು ವಿಭಾಗ ಮುಖ್ಯಸ್ಥರು ಅಥವಾ ಇಲಾಖಾ ಮುಖ್ಯಸ್ಥರು ಅಥವಾ ನೇಮಕ ಪ್ರಾಧಿಕಾರಸ್ಥರು ಈ ಕೆಳಕಂಡಂತೆ ಪರಿಗಣಿಸುವುದು.

(i) ಮೃತ ನೌಕರರು ಸಲ್ಲಿಸಿರುವ ಹಿಂದಿನ ವರ್ಷದ ವಾರ್ಷಿಕ ಆಸ್ತಿ ಮತ್ತು ಋಣಭಾರ ಪಟ್ಟಿಯಿಂದ ಪರಿಗಣಿಸುವುದು, ಸದರಿ ಆಸ್ತಿ ಮತ್ತು ಋಣಭಾರ ಪಟ್ಟಿ ಲಭ್ಯವಿಲ್ಲದಿದ್ದಲ್ಲಿ ತಹಸಿಲ್ದಾರ್ ಹುದ್ದೆಗಿಂತ ಕಡಿಮೆ ಇಲ್ಲದ ಕಂದಾಯ ಅಧಿಕಾರಿಯು ನೀಡುವ ಆದಾಯ ದೃಢೀಕರಣ ಪತ್ರ.

ಮತ್ತು,

(ii) ಒಂದು ವೇಳೆ ಮೃತಾವಲಂಬಿತ ನೌಕರರ ಕುಟುಂಬದ ಯಾವುದೇ ಸದಸ್ಯರು ರಾಜ್ಯ ಅಥವಾ ಕೇಂದ್ರ ಸರ್ಕಾರಿ ಅಥವಾ ಸಾರ್ವಜನಿಕ ಅಥವಾ ಖಾಸಗಿ ವಲಯದ ಅಧೀನದ ಅಥವಾ ಖಾಸಗಿ ಸಂಸ್ಥೆಯ ನೌಕರರಾಗಿದ್ದಲ್ಲಿ ಆ ಸಂಸ್ಥೆಯು ನೀಡುವ ಪ್ರಮಾಣ ಪತ್ರ ಮತ್ತು ಒಂದು ವೇಳೆ ಸದರಿ ಸದಸ್ಯರು ಸ್ವಯಂ ಉದ್ಯೋಗ ಹೊಂದಿದ್ದಲ್ಲಿ, ತಹಸಿಲ್ದಾರ್ ಹುದ್ದೆಗಿಂತ ಕಡಿಮೆ ಇಲ್ಲದ ಕಂದಾಯ ಅಧಿಕಾರಿಯು ನೀಡುವ ಆದಾಯ ದೃಢೀಕರಣ ಪತ್ರ.

(2) ಅನುಕಂಪದ ಆಧಾರದ ನೇಮಕಾತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 1982 ರಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ ಹಾಗೂ ಇತರ [illegible]

(ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 1982 ರಲ್ಲಿ ನಿಗದಿಪಡಿಸಿರುವ ವಯೋಮಿತಿಗೆ ಗರಿಷ್ಠ 5 ವರ್ಷಗಳ ವಿನಾಯಿತಿಯನ್ನು ನೀಡಲಾಗಿದೆ. ಸದರಿ ವಯೋಮಿತಿಯನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ಇದ್ದಂತೆ ಪರಿಗಣಿಸುವುದು.

(3) ಉದ್ಯೋಗ ಕೋರಿ ಅರ್ಜಿ ಸಲ್ಲಿಸುವ ಅರ್ಹ ಮೃತಾವಲಂಬಿತರನ್ನು ದರ್ಜೆ-3 ಮೇಲ್ವಿಚಾರಕೇತರ ಹುದ್ದೆಗಳಾದ ಕಿರಿಯ ಸಹಾಯಕ-ಕಂ-ಡಾಟಾ ಎಂಟ್ರಿ ಆಪರೇಟರ್, ಚಾಲಕ, ನಿರ್ವಾಹಕ, ಚಾಲಕ-ಕಂ-ನಿರ್ವಾಹಕ, ತಾಂತ್ರಿಕ ಸಹಾಯಕ ಮತ್ತು ಭದ್ರತಾ ರಕ್ಷಕ ಹಾಗೂ ದರ್ಜೆ-4 ರ ಹುದ್ದೆಗಳಾದ ಸಹಾಯಕ (ಕಛೇರಿ), ಕಛೇರಿ ಸಹಾಯಕ(ಸ್ವಚ್ಛತೆ), ಕಛೇರಿ ಸಹಾಯಕ(ತೋಟಗಾರಿಕೆ) ಹುದ್ದೆಗಳಿಗೆ ಮಾತ್ರ ಪರಿಗಣಿಸುವುದು.

(4) ಅನುಕಂಪದ ಆಧಾರದ ನೇಮಕಾತಿಯನ್ನು ನೇರ ನೇಮಕಾತಿಗೆ ಮೀಸಲಿರುವ ಹುದ್ದೆಗಳಿಗೆ ಮಾತ್ರ ಪರಿಗಣಿಸುವುದು.

**V ನೇಮಕಾತಿಗಾಗಿ ಅರ್ಜಿ ಸಲ್ಲಿಕೆ**

ಈ ನೀತಿಯ ಕ್ರಮಾಂಕ II, III, IV ರಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಯನ್ನು ಪೂರೈಸಿದ ಮೃತಾವಲಂಬಿತರು ನೌಕರರು ಮರಣ ಹೊಂದಿದ ಒಂದು ವರ್ಷದ ಅವಧಿಯೊಳಗಾಗಿ ಮೃತ ನೌಕರರು ಸೇವೆ ಸಲ್ಲಿಸುತ್ತಿದ್ದ ಕಾರ್ಯಸ್ಥಳವು ಯಾವ ವಿಭಾಗದ ವ್ಯಾಪ್ತಿಗೊಳಪಡುವುದೋ ಅಂತಹ ವಿಭಾಗದ ವಿಭಾಗೀಯ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸುವುದು. ಒಂದು ವೇಳೆ ಮೃತ ನೌಕರರು ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಯಾದಲ್ಲಿ ಯಾವ ವಿಭಾಗದಲ್ಲಿ ಉದ್ಯೋಗ ಪಡೆಯಲು ಬಯಸುತ್ತಾರೋ ಎಂಬುದನ್ನು ಅರ್ಜಿಯಲ್ಲಿ ತಿಳಿಸತಕ್ಕದ್ದು.

ನೌಕರರು ಮರಣ ಹೊಂದಿದ ಒಂದು ವರ್ಷದೊಳಗಾಗಿ ಮೃತಾವಲಂಬಿತರು ಅರ್ಜಿ ಸಲ್ಲಿಸತಕ್ಕದ್ದು, ವಿಫಲರಾದಲ್ಲಿ ಅವರು ಉದ್ಯೋಗ ಪಡೆಯುವ ಅವಕಾಶವನ್ನು ಶಾಶ್ವತವಾಗಿ ಕಳೆದುಕೊಳ್ಳುವರು.

ಒಂದು ವೇಳೆ ಸಂಸ್ಥೆಯ ನೌಕರರು ಮರಣ ಹೊಂದಿದಾಗ ಅವರ ಅಪ್ರಾಪ್ತ ಅವಲಂಬಿತರು (18 ವರ್ಷಕ್ಕಿಂತ ಕಡಿಮೆ ವಯಸ್ಸಿನ) ಉದ್ಯೋಗ ಕೋರಿದಲ್ಲಿ, ಅಪ್ರಾಪ್ತ ಅವಲಂಬಿತರು 18 ವರ್ಷ ತುಂಬಿದಾಗ ಅವರು ಹೊಂದಿದ ವಿದ್ಯಾರ್ಹತೆಗೆ ಅನುಗುಣವಾಗಿ ನಿಗಮದಲ್ಲಿನ ಜಾರಿಯಲ್ಲಿರುವ ನಿಯಮಾನುಸಾರ ಲಭ್ಯ ಖಾಲಿ ಹುದ್ದೆಗಳಿಗೆ ಮಾತ್ರ ನೇಮಕಾತಿಗೆ ಪರಿಗಣಿಸುವುದು. ಈ ಸಂಬಂಧ 18 ವರ್ಷ ತುಂಬಿದ ಒಂದು ವರ್ಷದೊಳಗಾಗಿ ಮೃತಾವಲಂಬಿತರು ಅವರು ಹೊಂದಿದ ವಿದ್ಯಾರ್ಹತೆ ವಿವರಗಳೊಂದಿಗೆ ಪುನ: ಮತ್ತೊಂದು ಅರ್ಜಿಯನ್ನು ನೀಡುವುದು. ಸದರಿ ಒಂದು ವರ್ಷದ ಅವಧಿಯಲ್ಲಿ ಮೃತಾವಲಂಬಿತರು ಅರ್ಜಿ ಸಲ್ಲಿಸದಿದ್ದಲ್ಲಿ ಅವರು ಉದ್ಯೋಗ ಪಡೆಯುವ ಅವಕಾಶವನ್ನು ಶಾಶ್ವತವಾಗಿ ಕಳೆದುಕೊಳ್ಳುವರು.

VI ನೇಮಕಾತಿ ಪ್ರಾಧಿಕಾರಸ್ಥರು

1. ನೇಮಕಾತಿ ಪ್ರಾಧಿಕಾರಸ್ಥರು ಮೃತಾವಲಂಬಿತರಿಂದ ಸ್ವೀಕರಿಸಿದ ಅರ್ಜಿಯನ್ನು ನಿಗಮದ ಭದ್ರತಾ ಮತ್ತು ಜಾಗೃತಾ ಇಲಾಖೆಯಿಂದ ನೈಜತೆ ತನಿಖೆಯ ವರದಿಯ ಆಧಾರದ ಮೇಲೆ ಪರಿಶೀಲಿಸಿ ಈ ನೀತಿಯನ್ವಯ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿದ ಮೃತಾವಲಂಬಿತರನ್ನು ನೇಮಕಾತಿ ಮಾಡುವುದು.
2. ಅನುಕಂಪದ ಆಧಾರದ ಮೇಲೆ ನೇಮಕ ಮಾಡಲು ಮೃತಾವಲಂಬಿತರು ನೀಡುವ ಅರ್ಜಿಯ ದಿನಾಂಕವನ್ನು ವರಿಷ್ಠತೆಗೆ ಪರಿಗಣಿಸುವುದು.
3. ಕರ್ತವ್ಯ ನಿರತರಾಗಿದ್ದಾಗ ಅಪಘಾತಕ್ಕೀಡಾಗಿ ಮೃತಪಟ್ಟ ನೌಕರರ ಅವಲಂಬಿತರ ಪ್ರಕರಣಗಳು ಹಾಗೂ ಸ್ವಾಭಾವಿಕವಾಗಿ ಮೃತಪಟ್ಟ ನೌಕರರ ಅವಲಂಬಿತರ ಪ್ರಕರಣಗಳ ವರಿಷ್ಠತೆಯನ್ನು ಪ್ರತ್ಯೇಕವಾಗಿ ನಿರ್ವಹಿಸಿ 1:1 ರ ಅನುಪಾತದಲ್ಲಿ ಆದ್ಯತೆಯನ್ನು ಅನುಸರಿಸಿ ಈ ನೀತಿಯನ್ವಯ ನೇಮಕಾತಿ ಮಾಡಿಕೊಳ್ಳುವುದು.
4. ಈ ನೀತಿಯನ್ವಯ ನೇಮಕಾತಿ ಆದೇಶ ಹೊರಡಿಸಿದ ನಂತರ ಹುದ್ದೆ ಬದಲಾವಣೆ ಅಥವಾ ಅಭ್ಯರ್ಥಿ ಬದಲಾವಣೆಗೆ ಅವಕಾಶವಿರುವುದಿಲ್ಲ. ಆದಾಗ್ಯೂ ಮೃತಾವಲಂಬಿತರು ಅರ್ಜಿ ಸಲ್ಲಿಸಿ, ನೇಮಕಾತಿ ಸಮಯದಲ್ಲಿ ಅಭ್ಯರ್ಥಿ,ವಿದ್ಯಾರ್ಹತೆ, ಹುದ್ದೆ ಬದಲಾವಣೆಗೆ ಕೋರಿದ್ದಲ್ಲಿ, ಮೂಲ ವರಿಷ್ಟತೆಯೊಂದಿಗೆ ಪರಿಗಣಿಸಲಾಗುವುದು.
5. ಸಂಬಂಧಿಸಿದ ವಿಭಾಗಗಳಲ್ಲಿ ನೇಮಕಾತಿಗೆ ಅರ್ಹ ಮೃತಾವಲಂಬಿತರು ಲಭ್ಯವಿದ್ದು ಖಾಲಿ ಹುದ್ದೆಗಳು ಇಲ್ಲದಿದ್ದರೆ ಹಾಗೂ ಹುದ್ದೆಗಳು ಖಾಲಿ ಇದ್ದು ಅರ್ಹ ಮೃತಾವಲಂಬಿತರು ಲಭ್ಯವಿರದೇ ಇದ್ದರೆ, ಈ ಎರಡು ಪ್ರಕರಣಗಳಲ್ಲಿ ಮಾಹಿತಿಯನ್ನು ಕೇಂದ್ರಕಛೇರಿಗೆ ನೀಡುವುದು. ಇಂತಹ ಪ್ರಕರಣಗಳಲ್ಲಿ ಕೇಂದ್ರ ಕಛೇರಿ ಮಟ್ಟದಲ್ಲಿ ಪರಿಶೀಲಿಸಿ ಮೃತಾವಲಂಬಿರು ಬೇರೆ ವಿಭಾಗಗಳಲ್ಲಿ ನೇಮಕ ಹೊಂದಲು ಇಚ್ಛಿಸುವವರನ್ನು ಸಾಮಾನ್ಯ ವರಿಷ್ಠತೆ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆಯನ್ನು ಕೇಂದ್ರಕಛೇರಿ ಮಟ್ಟದಲ್ಲಿ ನಡೆಸುವುದು.
6. ಮೃತ ಅಧಿಕಾರಿ ಹಾಗೂ ದರ್ಜೆ-3 ಮೇಲ್ವಿಚಾರಕ ಸಿಬ್ಬಂದಿಗಳ ಮೃತಾವಲಂಬಿತರು ಅರ್ಜಿ ಸಲ್ಲಿಸುವಾಗ, ಅವರು ನೇಮಕಾತಿಗೆ ಇಚ್ಛಿಸುವ ವಿಭಾಗವನ್ನು ಸ್ಪಷ್ಟವಾಗಿ ಅರ್ಜಿಯಲ್ಲಿ ನಮೂದಿಸಿ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಭಾಗದ ವಿಭಾಗೀಯ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು. ಸದರಿ ಅರ್ಜಿಯನ್ನು ಮೃತಾವಲಂಬಿತರು ಇಚ್ಛಿಸುವ ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸತಕ್ಕದ್ದು.

7. ಈ ನೀತಿಯನ್ವಯ ನೇಮಕಾತಿಯನ್ನು ಜಾರಿಗೊಳಿಸಲು ಲಗತ್ತಿಸಿರುವ ನಮೂನೆಯಲ್ಲಿ ದಾಖಲಾತಿಯನ್ನು ನಿರ್ವಹಿಸತಕ್ಕದ್ದು.

8. ಈ ನೀತಿಯು ಜಾರಿಗೆ ಬರುವ ಮುನ್ನ ಬಾಕಿ ಇರುವ ಅರ್ಜಿಗಳನ್ನು ಈ ಕೆಳಕಂಡಂತೆ ವಿಲೇವಾರಿ ಮಾಡುವುದು.

ಅ) ಈಗಾಗಲೇ ಅನುಕಂಪದ ಆಧಾರದ ಮೇಲೆ ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವವರನ್ನು ಈ ನೀತಿಯು ಜಾರಿಗೆ ಬರುವ ಮುನ್ನ ಚಾಲ್ತಿಯಲ್ಲಿದ್ದ ಅವಕಾಶಗಳ ಪ್ರಕಾರ ಪರಿಗಣಿಸುವುದು.

ಆ) ಈಗಾಗಲೇ ಅನುಕಂಪದ ಆಧಾರದ ಮೇಲೆ ದರ್ಜೆ-3 ಮೇಲ್ವಿಚಾರಕ ಹುದ್ದೆಗಳಾದ ಪಾರುಪತ್ತೆಗಾರ, ಕಿರಿಯ ಅಭಿಯಂತರ (ಸಿವಿಲ್/ಎಲೆಕ್ಟ್ರಿಕಲ್) ಹಾಗೂ ಗಣಕ ಮೇಲ್ವಿಚಾರಕ ಹುದ್ದೆಗಳಿಗೆ ಉದ್ಯೋಗ ಕೋರಿರುವವರನ್ನು ಈ ನೀತಿಯು ಜಾರಿಗೆ ಬರುವ ಮುನ್ನ ಚಾಲ್ತಿಯಲ್ಲಿದ್ದ ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ರ ಹುದ್ದೆಗಳಿಗೆ ಪರಿಗಣಿಸುವುದು.

ಇ) ಈ ನೀತಿಯು ಜಾರಿಗೆ ಬರುವ ಮುನ್ನ ಸಂಸ್ಥೆಯ ಮೃತ ನೌಕರನ ಅವಲಂಬಿತರು ಉದ್ಯೋಗ ಕೋರಿ ಅರ್ಜಿ ಸಲ್ಲಿಸದೇ ಇದ್ದ ಪಕ್ಷದಲ್ಲಿ ಸದರಿ ಅರ್ಜಿಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ರನ್ವಯ ಪರಿಗಣಿಸುವುದು.

VII ಅಧಿಕಾರ ವ್ಯಾಖ್ಯಾನ :

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ರ ಸಂಬಂಧ ಯಾವುದೇ ಸ್ಪಷ್ಟೀಕರಣ ನೀಡಲು ವ್ಯವಸ್ಥಾಪಕ ನಿರ್ದೇಶಕರು, ಕರಾರಸಾನಿಗಮ ರವರು ಅಧಿಕಾರ ಹೊಂದಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ www.ksrtc.karnataka.gov.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.karnataka.gov.in

ಸಂ.ಕರಾಸ:ಕೇಕ:ಆಡಳತ:ಸೇನಿ: 192 :2021-22 **ದಿನಾಂಕ:** 31-01-2022

## ಸುತ್ತೋಲೆ ಸಂಖ್ಯೆ : 1700

**ವಿಷಯ:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ರ ಕಂಡಿಕೆ- (II) 1(ಬಿ), 1(ಸಿ),(III) (2), ಮತ್ತು (IV) 1(ಅ), 2(ಇ) ಮತ್ತು ಕಂಡಿಕೆ-(VI) (3)ಕ್ಕೆ ತಿದ್ದುಪಡಿ ಕುರಿತು.

**ಉಲ್ಲೇಖ:**1. ಕರಾಸಾ/ಕೇಕ/ಆಡಳತ/ಸೇನಿ/197/2018-19 ದಿನಾಂಕ:04-12-2018.
2. ಸುತ್ತೋಲೆ ಸಂಖ್ಯೆ:1659, ದಿನಾಂಕ:02-12-2019
3. ಸುತ್ತೋಲೆ ಸಂಖ್ಯೆ:1669, ದಿನಾಂಕ: 18.02.2020
4. ಮಂಡಳ ಠರಾವು 10262, ದಿನಾಂಕ:28-12-2021
5. ಮಂಡಳ ಠರಾವು 10263, ದಿನಾಂಕ:28-12-2021

- - - - -

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಮೃತಾವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿಗೆ ಉಲ್ಲೇಖ-1 ರಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ನ್ನು ನಿಗಮದಲ್ಲಿ ಜಾರಿಗೆ ತರಲಾಗಿದೆ. ಪ್ರಸ್ತುತ ಸರ್ಕಾರವು ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರಲ್ಲಿ ವಿವಾಹಿತ/ವಿಧವಾ ಮಗಳಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ಅವಕಾಶದ ಬಗ್ಗೆ ಹಾಗೂ ಇತರೆ ಅಂಶಗಳನ್ನು ಬದಲಾವಣೆ ಮಾಡಿರುತ್ತದೆ. ಅದರಂತೆ, ನಿಗಮದ ಅಗತ್ಯತೆಗೆ ಅನುಗುಣವಾಗಿ, ನೀತಿಯಲ್ಲಿ ಸೂಕ್ತ ಮಾರ್ಪಾಡು ಹಾಗೂ ಕೋವಿಡ್-19 ಸಾಂಕ್ರಾಮಿಕ ಖಾಯಿಲೆಯಿಂದ ಮೃತರಾದ ನೌಕರರ ಅವಲಂಬಿತರಿಗೆ ಶೀಘ್ರ ಪರಿಹಾರ ನೀಡುವ ಉದ್ದೇಶದಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ರ ಕಂಡಿಕೆ- (II) 1(ಬಿ), 1(ಸಿ), (III) (2), ಮತ್ತು (IV) 1(ಅ), 2(ಇ) ಹಾಗೂ (VI) (3) ರಲ್ಲಿ ಅಗತ್ಯ ತಿದ್ದುಪಡಿ ಮಾಡುವ ಕುರಿತು ಪ್ರಸ್ತಾವನೆಯನ್ನು ನಿಗಮದ ನಿರ್ದೇಶಕ ಮಂಡಳಿಯಲ್ಲಿ ಮಂಡಿಸಲಾಗಿದ್ದು, ನಿಗಮದ ನಿರ್ದೇಶಕರ ಮಂಡಳಿಯು ಠರಾವು ಸಂಖ್ಯೆ: 10262 ಮತ್ತು 10263, ದಿನಾಂಕ:28-12-2021 ರನ್ವಯ ಒಪ್ಪಿಗೆ ನೀಡಿರುತ್ತದೆ.

ಅದರಂತೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ರ ಕಂಡಿಕೆ- (II) 1(ಬಿ), 1(ಸಿ), (III) (2), ಮತ್ತು (IV) 1(ಅ), 2(ಇ) ಹಾಗೂ (VI) (3) ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

II ವ್ಯಾಖ್ಯಾನ:

(1) **(b) ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು.**

"**(b)** "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೃತ ನೌಕರರ ಅವಲಂಬಿತ" ಎಂದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೃತ ನೌಕರನೊಂದಿಗೆ ವಾಸವಾಗಿದ್ದ ಮತ್ತು ಆತನಿಗೆ ಅವಲಂಬಿತರಾಗಿದ್ದ ಮತ್ತು ನೀತಿಯ ಅಂಶ ಸಂಖ್ಯೆ 4(1) ರ ವಿವರಣೆಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿರುವ ಆತನ ಕುಟುಂಬದ ಸದಸ್ಯರು.

(1)(c) **ಸಂಸ್ಥೆಯ ಮೃತ ನೌಕರರಿಗೆ ಸಂಬಂಧಿಸಿದಂತೆ "ಕುಟುಂಬ" ಎಂದರೆ:-**

(i) ಮೃತ ಪುರುಷ ವಿವಾಹಿತ ನೌಕರನಾದ ಸಂದರ್ಭದಲ್ಲಿ ಆತನ ಮೇಲೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ವಿಧವಾ ಪತ್ನಿ, ಮಗ ಮತ್ತು ಮಗಳು (ಅವಿವಾಹಿತೆ/ವಿವಾಹಿತೆ/ವಿಚ್ಛೇದಿತೆ/ವಿಧವೆ);

(ii) ಮೃತ ಮಹಿಳಾ ವಿವಾಹಿತ ನೌಕರಳಾದ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಮಗ, ಮಗಳು (ಅವಿವಾಹಿತೆ/ವಿವಾಹಿತೆ/ವಿಚ್ಛೇದಿತೆ/ವಿಧವೆ), ಮತ್ತು ವಿಧುರ ಪತಿ;

(iii) ಮೃತ ಪುರುಷ ಅವಿವಾಹಿತ ನೌಕರನಾದ ಸಂದರ್ಭದಲ್ಲಿ ಆತನ ಮೇಲೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ಸಹೋದರ ಅಥವಾ ಸಹೋದರಿ;

(iv) ಮೃತ ಮಹಿಳಾ ಅವಿವಾಹಿತ ನೌಕರಳಾದ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಸಹೋದರ ಅಥವಾ ಸಹೋದರಿ;

III. **ನೇಮಕಾತಿಗೆ ಅರ್ಹತೆಗಳು:-**

(2) **ಈ ನೀತಿಯಡಿಯಲ್ಲಿ ಕುಟುಂಬ ವ್ಯಾಖ್ಯಾನದ ಪರಿಮಿತಿಗೆ ಒಳಪಟ್ಟಂತೆ ನಿಗಮದ ಮೃತ ನೌಕರರ ಅವಲಂಬಿತರಿಗೆ ಈ ಕೆಳಕಂಡ ಆದ್ಯತಾ ಕ್ರಮವನ್ನು ಅನುಸರಿಸಿ ಉದ್ಯೋಗ ನೀಡುವುದು:-**

(i) ಮೃತ ಪುರುಷ ವಿವಾಹಿತ ನೌಕರನ ಸಂದರ್ಭದಲ್ಲಿ ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ,-

(ಅ) ವಿಧವಾ ಪತ್ನಿ ; ಮತ್ತು

(ಆ) ಮೃತನ ವಿಧವಾ ಪತ್ನಿಯು ನೇಮಕಾತಿಗಾಗಿ ಅರ್ಹಳಲ್ಲದಿದ್ದಲ್ಲಿ ಅಥವಾ ಸಮುಚಿತ ಕಾರಣಕ್ಕಾಗಿ ಅವಳು ನೇಮಕಾತಿಯನ್ನು ಒಪ್ಪದಿದ್ದಲ್ಲಿ, ಮೃತ ನೌಕರನ ವಿಧವಾ ಪತ್ನಿಯು ಆಯ್ಕೆ ಮಾಡಿದ ಆತನ ಮಗ ಅಥವಾ ಮಗಳು.

ಟಿಪ್ಪಣಿ: ಮೃತ ನೌಕರನ ಪತ್ನಿಯು ಆತನಿಗೂ ಮೊದಲೇ ಮೃತಪಟ್ಟಿದ್ದಲ್ಲಿ, ಮಕ್ಕಳ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

1(ಅ) ನೇ ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು. ಎಂದರೆ:-

1(ಅ) ಮೃತ ಪುರುಷ ಅವಿವಾಹಿತ ನೌಕರನ ಸಂದರ್ಭದಲ್ಲಿ ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ತಂದೆ ಅಥವಾ ತಾಯಿಯು ಆಯ್ಕೆ ಮಾಡಿದ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆತನ ತಾಯಿಯು ಆಯ್ಕೆ ಮಾಡಿದ ಆತನ ಸಹೋದರ ಅಥವಾ ಸಹೋದರಿ;

ಟಿಪ್ಪಣಿ: ಮೃತ ನೌಕರನ ತಂದೆ/ತಾಯಿ ಆತನಿಗೂ ಮೊದಲೇ ಮೃತಪಟ್ಟಿದ್ದಲ್ಲಿ, ಸಹೋದರ/ಸಹೋದರಿಯ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

2 ನೇ ಉಪಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು. ಎಂದರೆ:-

2 ಮೃತ ಮಹಿಳಾ ವಿವಾಹಿತ ನೌಕರಳ ಸಂದರ್ಭದಲ್ಲಿ, ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ:-

(ಅ) ಮೃತ ನೌಕರಳ ವಿಧುರ ಪತಿಯು ಆಯ್ಕೆ ಮಾಡಿದ ಮಗ ಅಥವಾ ಮಗಳು ಮತ್ತು;
(ಆ) ಮಗ ಅಥವಾ ಮಗಳು ಅರ್ಹರಿಲ್ಲದಿದ್ದಲ್ಲಿ ಅಥವಾ ಯಾವುದೇ ಸಮುಚಿತ ಕಾರಣಕ್ಕಾಗಿ ನೇಮಕಾತಿಯನ್ನು ಒಪ್ಪದಿದ್ದಲ್ಲಿ ಆಕೆಯ ವಿಧುರ ಪತಿ;

ಟಿಪ್ಪಣಿ: ಮೃತ ನೌಕರಳ ಪತಿಯು ಆಕೆಗೂ ಮೊದಲೇ ಮೃತಪಟ್ಟಿದ್ದಲ್ಲಿ, ಮಕ್ಕಳ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

2(ಅ) ನೇ ಉಪಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು. ಎಂದರೆ:-

(2ಅ) ಮೃತ ಮಹಿಳಾ ಅವಿವಾಹಿತ ನೌಕರಳ ಸಂದರ್ಭದಲ್ಲಿ ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ತಂದೆ ಅಥವಾ ತಾಯಿಯು ಆಯ್ಕೆ ಮಾಡಿದ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆಕೆಯ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ;

ಟಿಪ್ಪಣಿ: ಮೃತ ನೌಕರಳ ತಂದೆ/ತಾಯಿ ಆಕೆಗೂ ಮೊದಲೇ ಮೃತಪಟ್ಟಿದ್ದಲ್ಲಿ, ಸಹೋದರ/ಸಹೋದರಿಯ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

IV ನೇಮಕಾತಿ ಷರತ್ತು ಮತ್ತು ನಿಬಂಧನೆಗಳು:

(1) ರ ವಿವರಣೆಯ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

(ಇ) "ಪರಂತು, ಕಂಡಿಕೆ-1 (ಅ ಮತ್ತು ಆ) ರಡಿ ಏನೇ ಇದ್ದರೂ, ಅದು ದರ್ಜೆ-3 ಮತ್ತು ದರ್ಜೆ-4 ಕ್ಕೆ ಸೇರಿದ ಸಂಸ್ಥೆಯ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ"

. . 4

(1) (ಇ)ರ ಬದಲಾಗಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಈ ನೀತಿ ಅಡಿಯಲ್ಲಿ ನೇಮಕಾತಿಯನ್ನು ಕೋರುವ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 1982 ರಲ್ಲಿ ನಿಗದಿಪಡಿಸಿರುವ ವಯೋಮಿತಿಗೆ ಗರಿಷ್ಠ 5 ವರ್ಷಗಳ ವಿನಾಯಿತಿಯನ್ನು ನೀಡಬಹುದಾಗಿದೆ. ಸದರಿ ವಯೋಮಿತಿಯನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ಇದ್ದಂತೆ ಪರಿಗಣಿಸುವುದು".

VI ನೇಮಕಾತಿ ಪ್ರಾಧಿಕಾರಸ್ಥರು

3 "ಕರಾರಸಾ ನಿಗಮದಲ್ಲಿ ಕರ್ತವ್ಯ ನಿರತರಾಗಿದ್ದಾಗ ಅಪಘಾತಕ್ಕೀಡಾಗಿ ಮೃತಪಟ್ಟ ನೌಕರರ ಅವಲಂಬಿತರ ಪ್ರಕರಣಗಳು ಹಾಗೂ ಕೋವಿಡ್-19 ರಿಂದ ಮೃತಪಟ್ಟ ನೌಕರರ ಮೃತಾವಲಂಬಿತರ ಪ್ರಕರಣಗಳು ಈ ಎರಡೂ ವರ್ಗಗಳಿಗೆ ಒಂದರಷ್ಟು ಅನುಪಾತವನ್ನು ಹಾಗೂ ಸ್ವಾಭಾವಿಕವಾಗಿ ಮೃತಪಟ್ಟ ನೌಕರರ ಪ್ರಕರಣಗಳಿಗೆ ಉಳಿದ ಒಂದರಷ್ಟು ಅನುಪಾತ, ಅಂದರೆ 1:1 ರ ಅನುಪಾತದಂತೆ ವರಿಷ್ಠತೆಯ ಆದ್ಯತೆಯನ್ನು ಪ್ರತ್ಯೇಕವಾಗಿ ನಿರ್ವಹಿಸಿ ಈ ನೀತಿಯನ್ವಯ ನೇಮಕಾತಿ ಮಾಡಿಕೊಳ್ಳುವುದು"

ಉಳಿದಂತೆ, ಉಲ್ಲೇಖಿತ ನೀತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸಂಬಂಧಪಟ್ಟವರೆಲ್ಲರೂ ಮೇಲಿನ ತಿದ್ದುಪಡಿಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

ಪ್ರತಿ ಮಾಹಿತಿಗಾಗಿ:

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಕಕರಸಾ ನಿಗಮ ರವರಿಗೆ.
3. ನಿರ್ದೇಶಕರು (ಸಿಬ್ಬಂದಿ:ಜಾಗೃತ), ಕರಾರಸಾ ನಿಗಮ, ರವರಿಗೆ.

ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ವಿಭಾಗೀಯ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರುಗಳಿಗೆ
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ/ವಾಕರಸಾ ಸಂಸ್ಥೆ/ಕಕರಸಾ ನಿಗಮ ರವರಿಗೆ.
6. ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ, ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರವರಿಗೆ ವರದಿ ಸಲ್ಲಿಸುವುದು.
7. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ)/(ನೇಮಕ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
9. ಪ್ರಧಾನ ಕಛೇರಿ ಪತ್ರ ಕಡತ.

ಅಟಲ್ ಬಿಹಾರಿ ವಾಜಪೇಯಿ ಸಂಕೀರ್ಣ,
ಕೇಂದ್ರ ಕಛೇರಿ, ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು-೫೬೦೦೨೭ :
ಭಾರತ, ದೂರವಾಣಿ:080-22537402
ವೆಬ್ ಸೈಟ್ :www.mybmtc.in

ಆಡಳಿತ ಇಲಾಖೆ

Atal Bihari Vajpeyi Complex
Central Offices, K.H. Road, Shanthinagar,
Bangalore-560027 : India
Tel: 080-22537402
Website : www.mybmtc.in

ಸಂ:ಬೆಂಮಸಾಸಂ/ಕೇಕ/ಆಡಳಿತ/ಸೇನಿ/ 7518/2022-23 ದಿನಾಂಕ: 10/03/2023

**ಸುತ್ತೋಲೆ ಸಂಖ್ಯೆ: 162 /2022-23**

ವಿಷಯ: ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲು ಗರಿಷ್ಠ ವಯೋಮಿತಿಯಿಂದ ವಿನಾಯಿತಿ ನೀಡುವ ಕುರಿತು.

ಉಲ್ಲೇಖ: 1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018.
2. ಸುತ್ತೋಲೆ ಸಂಖ್ಯೆ: 1700,ಸಂ:ಕರಾಸ:ಕೇಕ:ಆಡಳಿತ:ಸೇನಿ:192 ದಿ:31.01.2022.
3. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ:ಸಿಆಸುಇ 26 ಸೇಅನೇ2018 ದಿ:9.4.2021.
4. ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996, ತಿದ್ದುಪಡಿ ನಿಯಮಗಳು 2021.

* * * * *

ಸಂಸ್ಥೆಯಲ್ಲಿ ಅನುಕಂಪ ಆಧಾರಿತ ನೌಕರಿ ಕುರಿತು ಉಲ್ಲೇಖಿತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ಹಾಗೂ ಸುತ್ತೋಲೆಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದ್ದು, ಅನುಕಂಪದ ಆಧಾರದ ಮೇಲೆ ನೌಕರಿಯನ್ನು ಕೋರುವ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ 1982 ರಲ್ಲಿ ನಿಗದಿಪಡಿಸಿರುವ ವಯೋಮಿತಿಗೆ ಗರಿಷ್ಠ ೦೫ ವರ್ಷಗಳ ವಿನಾಯತಿಯನ್ನು ನೀಡಲಾಗಿರುತ್ತದೆ.

ಪ್ರಸ್ತುತ ಹಲವಾರು ಪ್ರಕರಣಗಳಲ್ಲಿ ಗರಿಷ್ಠ ವಯೋಮಿತಿ ಮೀರಿರುವ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿ ರವರುಗಳು ಅನುಕಂಪಧ ಆಧಾರದ ಮೇಲೆ ನೌಕರಿ ಪಡೆಯಲು ವಂಚಿತರಾಗುತ್ತಿರುವುದು ಕಂಡುಬಂದಿರುತ್ತದೆ.

ತತ್ಸಂಬಂಧ ಪರಿಶೀಲಿಸಲಾಗಿದ್ದು, ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಜಾರಿಯಲ್ಲಿರುವ ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996, ತಿದ್ದುಪಡಿ ನಿಯಮಗಳು 2021, (ದಿನಾಂಕ: 31.05.2021 ರಲ್ಲಿದ್ದಂತೆ) ರಂತೆ ಸರ್ಕಾರದ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿ ರವರುಗಳಿಗೆ ಸಂಬಂಧಿಸಿದಂತೆ ಗರಿಷ್ಠ ವಯೋಮಿತಿಯನ್ನು ಅರ್ಜಿ ಸಲ್ಲಿಸುವ ದಿನಾಂಕಕ್ಕೆ ೫೫ ವರ್ಷ ಮೀರಿರತಕ್ಕದಲ್ಲವೆಂದು ನಿಯಮವಿರುತ್ತದೆ.

ಮೇಲ್ಕಂಡ ಸರ್ಕಾರದ ನಿಯಮಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿಯೂ ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಆದ್ದರಿಂದ ಸರ್ಕಾರದಲ್ಲಿರುವಂತೆ ಅನುಕಂಪದ ಆಧಾರದ ಮೇಲೆ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿ ರವರುಗಳು ನೌಕರಿ ನೀಡಲು ಅವರುಗಳ ಗರಿಷ್ಠ ವಯೋಮಿತಿಯನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ಇದ್ದಂತೆ ೫೫ ವರ್ಷ ಮೀರತಕ್ಕದ್ದಲ್ಲವೆಂದು ನಿಗಧಿಪಡಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು.

10/3/2023
ವ್ಯವಸ್ಥಾಪಕ ನಿರ್ದೇಶಕರು
ಬೆಂ.ಮ.ಸಾ.ಸಂಸ್ಥೆ

ಪ್ರತಿಯನ್ನು:
1) ಮಾನ್ಯ ಅಧ್ಯಕ್ಷರು ರವರ ಆಪ್ತ ಸಹಾಯಕರು, ಬೆಂಮಸಾಸಂಸ್ಥೆ, ಕೇಂದ್ರ ಕಛೇರಿ ರವರ ಮಾಹಿತಿಗಾಗಿ.
2) ನಿರ್ದೇಶಕರು (ಮಾ&ತಂ) / ನಿರ್ದೇಶಕರು (ಭ&ಜಾ) ಬೆಂಮಸಾಸಂಸ್ಥೆ ರವರ ಮಾಹಿತಿಗಾಗಿ.
3) ಎಲ್ಲಾ ಇಲಾಖಾ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಬೆಂಮಸಾಸಂರವರ ಮಾಹಿತಿಗಾಗಿ&ಸೂಕ್ತ ಕ್ರಮಕ್ಕಾಗಿ.
4) ಕಾರ್ಯ ವ್ಯವಸ್ಥಾಪಕರು ಕೇಂದ್ರೀಯ ಕಾರ್ಯಾಗಾರ-1 ಮತ್ತು ವಿಭಾಗೀಯ ತಾಂತ್ರಿಕ ಅಭಿಯಂತರರು, ಕಾರ್ಯಾಗಾರ-1, ಸಹಾಯಕ ಯಾಂತ್ರಿಕ ಅಭಿಯಂತರರು ಕಾರ್ಯಾಗಾರ-2, & 4 ರವರುಗಳ ಮಾಹಿತಿಗಾಗಿ

ಅಟಲ್ ಬಿಹಾರಿ ವಾಜಪೇಯಿ ಸಂಕೀರ್ಣ,
ಕೇಂದ್ರ ಕಛೇರಿ, ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು-560027 :
ಭಾರತ, ದೂರವಾಣಿ:080-22537402
ವೆಬ್ ಸೈಟ್ :www.mybmtc.in

ಆಡಳಿತ ಇಲಾಖೆ

Atal Bihari Vajpeyi Complex
Central Offices, K.H. Road, Shanthinagar,
Bangalore-560027 : India
Tel: 080-22537402
Website : www.mybmtc.in

ಸಂ:ಬೆಂಮಸಾಸಂ/ಕೇಕ/ಆಡಳಿತ/ಸೇನಿ/7518/2022-23 ದಿನಾಂಕ: 10/03/2023

**ಸುತ್ತೋಲೆ ಸಂಖ್ಯೆ: 162 /2022-23**

ವಿಷಯ: ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲು ಗರಿಷ್ಠ ವಯೋಮಿತಿಯಿಂದ ವಿನಾಯಿತಿ ನೀಡುವ ಕುರಿತು.

ಉಲ್ಲೇಖ:
1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018.
2. ಸುತ್ತೋಲೆ ಸಂಖ್ಯೆ: 1700,ಸಂ:ಕರಾಸ:ಕೇಕ:ಆಡಳಿತ:ಸೇನಿ:192 ದಿ:31.01.2022.
3. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ:ಸಿಆಸುಇ 26 ಸೇಅನೇ 2018 ದಿ:9.4.2021.
4. ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996, ತಿದ್ದುಪಡಿ ನಿಯಮಗಳು 2021.

* * * * *

ಸಂಸ್ಥೆಯಲ್ಲಿ ಅನುಕಂಪ ಆಧಾರಿತ ನೌಕರಿ ಕುರಿತು ಉಲ್ಲೇಖಿತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ಹಾಗೂ ಸುತ್ತೋಲೆಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದ್ದು, ಅನುಕಂಪದ ಆಧಾರದ ಮೇಲೆ ನೌಕರಿಯನ್ನು ಕೋರುವ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ 1982 ರಲ್ಲಿ ನಿಗದಿಪಡಿಸಿರುವ ವಯೋಮಿತಿಗೆ ಗರಿಷ್ಠ 05 ವರ್ಷಗಳ ವಿನಾಯತಿಯನ್ನು ನೀಡಲಾಗಿರುತ್ತದೆ.

ಪ್ರಸ್ತುತ ಹಲವಾರು ಪ್ರಕರಣಗಳಲ್ಲಿ ಗರಿಷ್ಠ ವಯೋಮಿತಿ ಮೀರಿರುವ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿ ರವರುಗಳು ಅನುಕಂಪಧ ಆಧಾರದ ಮೇಲೆ ನೌಕರಿ ಪಡೆಯಲು ವಂಚಿತರಾಗುತ್ತಿರುವುದು ಕಂಡುಬಂದಿರುತ್ತದೆ.

ತತ್ಸಂಬಂಧ ಪರಿಶೀಲಿಸಲಾಗಿದ್ದು, ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಜಾರಿಯಲ್ಲಿರುವ ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996, ತಿದ್ದುಪಡಿ ನಿಯಮಗಳು 2021, (ದಿನಾಂಕ: 31.05.2021 ರಲ್ಲಿದ್ದಂತೆ) ರಂತೆ ಸರ್ಕಾರದ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿ ರವರುಗಳಿಗೆ ಸಂಬಂಧಿಸಿದಂತೆ ಗರಿಷ್ಠ ವಯೋಮಿತಿಯನ್ನು ಅರ್ಜಿ ಸಲ್ಲಿಸುವ ದಿನಾಂಕಕ್ಕೆ 55 ವರ್ಷ ಮೀರಿರತಕ್ಕದಲ್ಲವೆಂದು ನಿಯಮವಿರುತ್ತದೆ.

ಮೇಲ್ಕಂಡ ಸರ್ಕಾರದ ನಿಯಮಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿಯೂ ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಆದ್ದರಿಂದ ಸರ್ಕಾರದಲ್ಲಿರುವಂತೆ ಅನುಕಂಪದ ಆಧಾರದ ಮೇಲೆ ಮೃತ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿ ರವರುಗಳು ನೌಕರಿ ನೀಡಲು ಅವರುಗಳ ಗರಿಷ್ಠ ವಯೋಮಿತಿಯನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ಇದ್ದಂತೆ 55 ವರ್ಷ ಮೀರತಕ್ಕದ್ದಲ್ಲವೆಂದು ನಿಗದಿಪಡಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು.

Sathyavathi 10/3/2023
ವ್ಯವಸ್ಥಾಪಕ ನಿರ್ದೇಶಕರು
ಬೆಂ.ಮ.ಸಾ.ಸಂಸ್ಥೆ

<u>ಪ್ರತಿಯನ್ನು:</u>

1) ಮಾನ್ಯ ಅಧ್ಯಕ್ಷರು ರವರ ಆಪ್ತ ಸಹಾಯಕರು, ಬೆಂಮಸಾಸಂಸ್ಥೆ, ಕೇಂದ್ರ ಕಛೇರಿ ರವರ ಮಾಹಿತಿಗಾಗಿ.
2) ನಿರ್ದೇಶಕರು (ಮಾ&ತಂ) / ನಿರ್ದೇಶಕರು (ಭ&ಜಾ) ಬೆಂಮಸಾಸಂಸ್ಥೆ ರವರ ಮಾಹಿತಿಗಾಗಿ.
3) ಎಲ್ಲಾ ಇಲಾಖಾ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಬೆಂಮಸಾಸಂರವರ ಮಾಹಿತಿಗಾಗಿ&ಸೂಕ್ತ ಕ್ರಮಕ್ಕಾಗಿ.
4) ಕಾರ್ಯ ವ್ಯವಸ್ಥಾಪಕರು ಕೇಂದ್ರೀಯ ಕಾರ್ಯಾಗಾರ-1 ಮತ್ತು ವಿಭಾಗೀಯ ತಾಂತ್ರಿಕ ಅಭಿಯಂತರರು, ಕಾರ್ಯಾಗಾರ-1, ಸಹಾಯಕ ಯಾಂತ್ರಿಕ ಅಭಿಯಂತರರು ಕಾರ್ಯಾಗಾರ-2, & 4 ರವರುಗಳ ಮಾಹಿತಿಗಾಗಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.karnataka.gov.in

Karnataka State Road Transport Corporation
"Transport House" Central Offices.
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.karnataka.gov.in

ಸಂ.ಕರಾಸ:ಕೇಕ:ಆಡಳತ:ಸೇನಿ:/512/ 111 :2024-25 ದಿನಾಂಕ: 04-09-2024 10

## ಸುತ್ತೋಲೆ ಸಂಖ್ಯೆ : 1727

ವಿಷಯ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ರ ಮುಂದುವರೆದ ನಿರ್ದೇಶನಗಳು.

ಉಲ್ಲೇಖ: 1. ಕರಾಸಾ/ಕೇಕ/ಆಡಳತ/ಸೇನಿ/197/2018-19 ದಿನಾಂಕ:04-12-2018
2. ಸುತ್ತೋಲೆ ಸಂಖ್ಯೆ:1700, ದಿನಾಂಕ: 31.01.2022
3. ಮಂಡಳ ಠರಾವು 10438, ದಿನಾಂಕ: 12.07.2024

- - - - -

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ-2018 ನ್ನು ನಿಗಮದಲ್ಲಿ ಉಲ್ಲೇಖ-1 ರಂತೆ ಜಾರಿಗೆ ತರಲಾಗಿದೆ. ಸರ್ಕಾರವು ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ರಲ್ಲಿ ಮೃತಾವಲಂಬಿತ ಮಗಳಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಅವಕಾಶದ ಬಗ್ಗೆ ಹಾಗೂ ಇತರೆ ಅಂಶಗಳನ್ನು ಬದಲಾವಣೆ ಮಾಡಿರುತ್ತದೆ. ಅದರಂತೆ, ನಿಗಮದ ಅಗತ್ಯತೆಗೆ ಅನುಗುಣವಾಗಿ ಮೃತಾವಲಂಬಿತ ಮಗಳಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಅವಕಾಶವನ್ನು ಹಾಗೂ ಇತರೆ ಅವಕಾಶಗಳನ್ನು ಅಳವಡಿಸಿಕೊಳ್ಳಲಾಗಿದೆ.

ಪ್ರಸ್ತುತ, ಸುತ್ತೋಲೆ ಸಂಖ್ಯೆ:1700, ದಿನಾಂಕ: 31.01.2022 ರಲ್ಲಿನ ಅವಕಾಶಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 26 ಸೇಅನೇ 2018, ದಿನಾಂಕ: 09.04.2021 ಕ್ಕೆ ಅನ್ವಯವಾಗುವಂತೆ ಪ್ರಸ್ತಾವನೆಯನ್ನು ನಿಗಮದ ನಿರ್ದೇಶಕ ಮಂಡಳಿಯಲ್ಲಿ ಮಂಡಿಸಲಾಗಿದ್ದು, ನಿಗಮದ ನಿರ್ದೇಶಕರ ಮಂಡಳಿಯು ಠರಾವು ಸಂಖ್ಯೆ: 10438, ದಿನಾಂಕ: 12-07-2024 ರನ್ವಯ ಈ ಕೆಳಗಿನಂತೆ ಒಪ್ಪಿಗೆ ನೀಡಿರುತ್ತದೆ.

1. ಕರಾರಸಾ ನಿಗಮದಲ್ಲಿ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲು ಸುತ್ತೋಲೆ ಸಂಖ್ಯೆ: 1700, ದಿನಾಂಕ: 31.01.2022 ರ ಅವಕಾಶಗಳನ್ನು ಸರ್ಕಾರದ ಆದೇಶದ ದಿನಾಂಕ: 09.04.2021 ರಂದು ಹಾಗೂ ನಂತರ ನೌಕರರು ಮರಣ ಹೊಂದಿದ ಪ್ರಕರಣಗಳಲ್ಲಿ ಪರಿಗಣಿಸುವುದು.



Scanned with CamScanner

2. ನೌಕರರು ಮರಣ ಹೊಂದಿದ ಸಮಯದಲ್ಲಿ ಸೇವಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇದ್ದು, ತಡವಾಗಿ ಇತ್ಯರ್ಥಗೊಂಡಲ್ಲಿ ಹಾಗೂ ಕೌಟುಂಬಿಕ ವ್ಯಾಜ್ಯವು ಬಾಕಿ ಇದ್ದು, ತಡವಾಗಿ ಇತ್ಯರ್ಥವಾದಲ್ಲಿ, ಅಂತಹ ಪ್ರಕರಣವು/ವ್ಯಾಜ್ಯವು ಇತ್ಯರ್ಥವಾದ ಒಂದು ವರ್ಷದ ಒಳಗೆ ಮೃತಾವಲಂಬಿತರು ನೌಕರಿ ಕೋರಿ ಅರ್ಜಿ ಸಲ್ಲಿಸಲು ಅವಕಾಶ ನೀಡುವುದು.

ಸಂಬಂಧಪಟ್ಟವರೆಲ್ಲರೂ ಮೇಲಿನ ತಿದ್ದುಪಡಿಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಉಳಿದಂತೆ, ಉಲ್ಲೇಖಿತ ನೀತಿ ಹಾಗೂ ಸುತ್ತೋಲೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ವಿ.ಅನ್ಬುಕುಮಾರ್, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

ಪ್ರತಿ ಮಾಹಿತಿಗಾಗಿ:

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಕಕರಸಾ ನಿಗಮ ರವರಿಗೆ.
3. ನಿರ್ದೇಶಕರು (ಸಿಬ್ಬಂದಿ:ಜಾಗೃತ), ಕರಾರಸಾ ನಿಗಮ, ರವರಿಗೆ.

ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ವಿಭಾಗೀಯ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರುಗಳಿಗೆ
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ/ವಾಕರಸಾ ಸಂಸ್ಥೆ/ಕಕರಸಾ ನಿಗಮ ರವರಿಗೆ.
6. ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರವರಿಗೆ ವರದಿ ಸಲ್ಲಿಸುವುದು.
7. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ) / (ನೇಮಕ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
9. ಪ್ರಧಾನ ಕಛೇರಿ ವತ್ತ ಕಡತ.

Scanned with CamScanner